# ನನ್ನೀ ಜೀವನ

ತಾಯಿಯ ಹಾಲಿನ ಹನಿಯೇ ಚೆನ್ನ
ತಂದೆಯ ಆಧಾರದ ಏಣಿಯೇ ಚೆನ್ನ
ಬಾಂಧವ್ಯದ ಪ್ರೀತಿಯ ಗಣಿಯೇ ಚೆನ್ನ
ಕೈಯಲ್ಲಿ ಮುಟ್ಟಿದರೆ ಚಿನ್ನವೂ ಚೆನ್ನ

ಮೊಗ್ಗಿನ ಮನಸ್ಸು ಅರಳುವುದು ಚೆನ್ನ
ಕಣ್ಣೀರು ತೊಳೆಯುವ ಗೆಳೆತನವು ಚೆನ್ನ
ಗೆಳತನದೊಳಗಿರುವ ಜಗಳವು ಚೆನ್ನ
ಜಗಳದ ಜೊತೆಗಿರುವ ಮಮತೆಯು ಚೆನ್ನ

ನವ ಮಾಸದ ನೋವಿನ ಜನನ
ನಾನಾ ಬಗೆಯ ಇಹುದು ಮರಣ
ಅದ ನಡುವೆ ಮೂರು ದಿನ ಜೀವನ
ಅನುಭವಿಸೋಣ ಪ್ರತಿದಿನ ....... ಪ್ರತಿಕ್ಷಣ

ರಚನೆ :ವಿಖ್ಯಾತ .ಸಿ. ಎ
೧೦ ಬಿ ತರಗತಿ

# ಪಯಣ

ಸಾಗುತಿದೆ ಪಯಣ ಅರೆ ಕ್ಷಣದಲಿ
ಕ್ಷಣ-ಕ್ಷಣವು ಅಡಗಿದೆ ಹೃದಯ ಮಿಡಿತದಲಿ
ಕಡಿವಾಣಕೆ ಸಿಗದ ನನ್ನೀ ಬಾಳು
ಭಗವಂತನ ಬೆರಳ ತುದಿಯಲಿ

ಕಣ್ಣೆದುರಲೇ ಜೀವದ ಕೊಲೆ ಕೊಳ್ಳೆ
ಎಲ್ಲೆಲ್ಲೂ ಪಸರಿಸಿದೆ ಹೆಣಗಳ ಮಳೆ
ನಾಡಿನ ಪರಿಸ್ಥಿತಿ ನೋಡಿ ನೋಡಿ
ಮೂಕನಾದೆ ನಿಂತ – ನಿಂತಲ್ಲೇ

ದೇವ ನಿನ್ನ ಪಾದಗಳಿಗೆರಗಿ
ಭಿನ್ನಹಿಸುವೆನು ಮನವ ಕರಗಿ
ಜಗದ ಬೊಂಬೆಯಾಟವ ನೋಡು
ಜೀವದ ಉಳಿವಿಗೆ ಏನಾದರೂ ಮಾಡು..........!

ರಚನೆ:ವಿಖ್ಯಾತ .ಸಿ.ಎ
೧೦ ಬಿ ತರಗತಿ

## ಪ್ರಕೃತಿಯೇ ದೇವರು......!

## ಉಳಿಸಬೇಕು ಮಾನವರು......!

ಕಣ್ಣೆದುರಲೇ ನಿಂತಿರುವ ಸ್ವರ್ಗ
ಈ ನಮ್ಮ ಅಂದದ ನಿಸರ್ಗ
ಹಗಲಿರುಳು ಸಹಾಯ ಮಾಡಲು
ಬೇಕಿಲ್ಲ ಮೇಲು-ಕೀಳೆಂಬ ವರ್ಗ

ಎಷ್ಟು ಸುಂದರ ನಿನ್ನೀ ಒಡಲು
ಮಾತು ಬರುತ್ತಿಲ್ಲ ಹೊಗಳಲು
ಮರಗಿಡಗಳೇ ನಿನ್ನ ಮಕ್ಕಳು
ಸಾಧ್ಯವಾಗದು ಬೆಲೆ ಕಟ್ಟಲು

ಮಾನವನೆಂಬ ಕ್ರೂರ ಅಸುರ
ಮಾಡಿದನು ಪರಿಸರದ ಸಂಹಾರ
ನೀನಾಗಬೇಕು ಇದರ ಆದಾರ
ಆಗಲೇ ಈ ಪರಿಸರ ಸುಮಧುರ

## ನಡುಗಿದ ಕೇರಳ......!

ವರುಣಾರ್ಭಟಕೆ ತುತ್ತಾದ ಕೇರಳ
ಜನರ ಬದುಕಾಯಿತು ಕರಾಳ
ಯಾರು ಮಾಡಬಲ್ಲರು ಪರಿಹಾರ
ಯಾರು ಆಗಬಲ್ಲರು ಆಧಾರ

ತ್ರಿಶ್ಶೂರು,ಏರ್ನಾಕುಳಂ,ಇಡುಕ್ಕಿ
ಮುಳುಗಲು ಏನುಂಟು ಬಾಕಿ
ನಶಿಸುತ್ತಿದೆ ನೀರೊಳಗೆ ಸಿಕ್ಕಿ
ಉಳಿಸುತ್ತಿದೆ ನಮ್ಮೂರು ಖಾಕಿ

ದೇವರ ನಾಡೆಂಬ ಬಿರುದು
ಪ್ರಯೋಜನಕ್ಕಿಲ್ಲ ಈ ಸಮಯದಲಿ
ಕೇರಳವು ಉಳಿಯಲಿ
ಮುಂದೆ ದೇವರ ಕೈಯಲ್ಲಿ

ರಚನೆ :ವಿಖ್ಯಾತ .ಸಿ.ಎ
೧೦ ಬಿ ತರಗತಿ

# ಭಾರ್ಗವ ಭೂಮಿ

ಸ್ವಾರ್ಥ ಬಿಟ್ಟು ಪ್ರೀತಿಯ ನೀಡುವ
ನಮ್ಮ ಒಲವಿನ ತುಳುನಾಡು
ಪ್ರಾಣ ಬಿಟ್ಟು ಧೀರ ಮೆರೆದ
ರಾಣಿ ಅಬ್ಬಕ್ಕನ ಶೌರ್ಯ ನೋಡು

ಎಷ್ಟು ಸುಂದರ ಭಾರ್ಗವನ ಸೃಷ್ಟಿ
ಮಾತು ಬರುತ್ತಿಲ್ಲ ಹೊಗಳಲು
ತುಳು ಜನರ ಒಂದೇ ದೃಷ್ಟಿ
ಹಿಮ್ಮೆಟ್ಟುವುದಿಲ್ಲ ಗುರಿ ತಲುಪಲು

ತುಳುನಾಡ ಹೆಮ್ಮೆ ಕಂಬಳ
ಇಳಿಯುತ್ತಿದೆ ನಮ್ಮೀ ಬೆಂಬಲ
ಪುಣ್ಯ ಸಂಸ್ಕೃತಿಯ ರಕ್ಷಿಸಿ
ಎಸೆಯೋಣ ಮನಸಿನ ಕಶ್ಮಲ

ಕೋಟಿ ಕಲೆಗಳ ಜನ್ಮ ನೀಡಿ
ಪೋಷಿಸುವ ತವರೂರು
ಇನ್ಮುಂದೆ ಉಳಿಸುವದು
ನಾವಲ್ಲದೆ ಇನ್ನಾರು.............?

ರಚನೆ :ವಿಖ್ಯಾತ .ಸಿ.ಎ
೧೦ ಬಿ ತರಗತಿ

# ಕಡಲಿನ ಸೊಬಗು.....!

ಹೊತ್ತು ಮುಳುಗಿದ ಸಮಯದಲಿ
ಸೂರ್ಯನು ನೋಡಲು ಬಲುಚಂದ
ಕಣ್ಣಂಚಿನುದ್ದಕ್ಕೂ ಕಾಣುವ ಕಡಲಿನಲಿ
ವೈಶಿಷ್ಟ್ಯವ ನೋಡಲು ಎಂಥಅಂದ

ತಂಪಗಿನ ಮಾರುತ ಬೀಸುತಲಿಹುದು

ಮೈಯು ರೋಮಾಂಚನಗೊಂಡಂತೆ
ನೇಸರನು ನಾನಾವರ್ಣದಿ ಕಾಣುತಲಿಹುದು
ಕಣ್ಣಿಗೆ ಆಕರ್ಷಿಕವಾಗುವಂತೆ

ಮೀನನು ಹಿಡಿಯಲು ಹೋಗುವವರಷ್ಟೋ
ಸಂತೋಷದಿಂದ ನಲಿದಾಡುತಲಿ
ಜೀವದ ಭಯದಿಂದ ಸಾಗುವವುವೆಷ್ಟೋ
ಪ್ರಾಣರಕ್ಷಣೆಯ ಮಾಡುತಲಿ

ನೀರನು ಮುಟ್ಟಿ ರುಚಿನೋಡಿದರೆ
ಯಾರು ಕುಡಿಯುವ ಹಾಗಿಲ್ಲ
ಕಡಲ ಸೊಬಗನು ಬಯಸಿದರೆ
ಬಣ್ಣಿಸಿ ಮುಗಿಯುವ ಹಾಗಿಲ್ಲ

ರಚನೆ: ನವ್ಯ.ಕೆ
೯ ಎ ತರಗತಿ

# ಅಭಿವೃದ್ಧಿಯತ್ತ ಭಾರತ

ಅಭಿವೃದ್ಧಿ ಹೊಂದುತ್ತಿರುವ ದೇಶವೇ ಭಾರತ.ವಿದ್ಯಾಭ್ಯಾಸದಿಂದ ಪ್ರಾರಂಭವಾಗಿ ಉದ್ಯೋಗದ ತನಕವೂಅಭಿವೃದ್ಧಿಯನ್ನು ಪಡೆಯುತ್ತಿದೆ.ಭಾರತವು ಎಲ್ಲಾ ಕಾರ್ಯಗಳಲ್ಲಿಯೂ ಮುಂದೆ ಹೋಗುತ್ತಿದೆ.ಈ ದೇಶವನ್ನು ರೋಗ ಮುಕ್ತವಾಗಿಸಲು ಅದೆಷ್ಟೋ ಯೋಜನೆಗಳು ಜಾರಿಗೆ ಬಂದವು.'ಸ್ವಚ್ಛ ಭಾರತ ಅಭಿಯಾನ'ಎಂಬುದು ಇದರಲ್ಲಿ ಪ್ರಮುಖವಾಗಿದೆ.ಇದು ಮಾತ್ರವಲ್ಲದೆ ಜಿ ಎಸ್ ಟಿ ಯೋಗ್ಯಾಭ್ಯಾಸ ರೈತರ ಸಾಲಮನ್ನಾ ಸ್ವಚ್ಛತೆಯನ್ನು ಕಾಪಡಿಕೊಳ್ಳುವುದು. ಇದೆಲ್ಲವೂ ಅಭಿವೃದ್ಧಿಯ ಕೆಲವು ದ್ಯೋತಕವಾಗಿದೆ.

'ತನುವಿನ ಸಂರಕ್ಷಣೆಯ ಆರೋಗ್ಯ ಸಂರಕ್ಷಣೆ 'ಎಂಬಂತೆ ಭಾರತ ದೇಶವನ್ನು ಎಲ್ಲಾ ರೋಗಗಳಿಂದ ಮುಕ್ತವಾಗಿಸಲು ತಮ್ಮ ಶರೀರದ,ವ್ಯಕ್ತಿಯ ಶುಚಿತ್ವವನ್ನು ಮಾಡುವುದರಿಂದ ಮಾತ್ರ ಸಾಧ್ಯ. ನಿಜವಾಗಿ ಹೇಳಬೇಕೆಂದರೆ ದೇಶದ ಜನತೆಯಲ್ಲಿ ಬದಲಾವಣೆಯಾಗಿ ಭಾರತ ದೇಶದ ಅಭಿವೃದ್ಧಿಗೆ ಕೈ ಜೋಡಿಸಿದರೆ ಮಾತ್ರ ಬದಲಾವಣೆಯಾಗಲು ಸಾಧ್ಯ. ದೇಶದ ಒಳಿತನ್ನು ಬಯಸುವವರು 'ದೇಶ ಸೇವೆಯನ್ನು

ಈಶ ಸೇವೆ ಎಂದು ಮನಗಂಡವರು ಉತ್ತಮ ವ್ಯಕ್ತಿಗಳಾಗಲು ಸಾಧ್ಯ.ಹಿಂದಿನಿಂದ ಇಂದು ಭಾರತವು ಉನ್ನತ ಸ್ಥಾನದಲ್ಲಿದೆ ಆಸ್ಪತ್ರೆ ,ಶಾಲೆ,ರಾಜಕೀಯ ಸಂಸ್ಥೆಗಳಲ್ಲಿ ಮುಂದುವರಿದ ಭಾರತವು ಸಾಹಿತ್ಯದಲ್ಲಿಯೂ ಪ್ರಾಥಮಿಕ ಹಂತದಲ್ಲಿದೆ.

'ಭಾರತದ ಬೆನ್ನೆಲುಬು ಪ್ರಧಾನಿ ಮೋದಿ 'ಒಬ್ಬ ವ್ಯಕ್ತಿಗೆ ತನ್ನನ್ನು ನಿಲ್ಲುವಂತೆ ಮಾಡಲು ಬೆನ್ನೆಲುಬು ಎಷ್ಟು ಮುಖ್ಯವೋ ನಮ್ಮ ದೇಶವಾದ ಭಾರತಕ್ಕೆ ಪ್ರಧಾನಿ ಮೋದಿಯು ಕೂಡಾ ಅಷ್ಟೆ ಪ್ರಾಮುಖ್ಯದವರೆನಿಸುತ್ತಾರೆ.ಜಿ.ಎಸ್ .ಟಿ,ಸ್ವಚ್ಛ ಭಾರತ ಅಭಿಯಾನ ಮುಂತಾದವುಗಳ ಯೋಜನೆಗೆ ಕಾರಣರಾದವರು ಜಿ .ಎಸ್ .ಟಿ ಯಿಂದ ಅದೆಷ್ಟೋ ಪ್ರಜೆಗಳಿಗೆ ಉಳಿತಾಯವಾಗಿದೆ.ನಾಯಕತ್ವ ಹೇಗಿರಬೇಕು?ಪ್ರಜೆಗಳ ಪ್ರೇಮವೆಂದರೆ ಹೇಗೆ?ಪ್ರಜೆಗಳ ಅಗತ್ಯವನ್ನು ಪೂರೈಸುವುದು ಹೇಗೆ?ಎಂದು ತಿಳಿಯಲು ಮೋದಿಯವರೆ ಉದಾಹರಣೆಯಾಗಿದ್ದಾರೆ.ಈ ದೇಶದಿಂದ ತಿಳಿದುಕೊಳ್ಳಬಹುದಾದ ವಿಷಯಗಳು ಹಲವಾರಿದೆ.ಕುತುಬ್ ಮಿನಾರ್ ,ತಾಜ್ ಮಹಲ್ ಎಂಬೀ ಸ್ಮಾರಕಗಳಿರುವ ಗಂಗೆ ,ತುಂಗೆ ,ಗೋದಾವರಿ ,ನರ್ಮದಾ,ಸಿಂಧು,ಕಾವೇರಿ ಎಂಬೀ ನದಿಗಳು ಹರಿಯುವ , ದೇಶದ ರಕ್ಷಣೆಗಾಗಿ ಆವರಣಗೋಡೆಯಂತಿರವ ಅರಬ್ಬಿಸಮುದ್ರ ಕೆಳಭಾಗದಲ್ಲಿ , ಹಿಮಾಲಯ ಪರ್ವತದ ಮೇಲ್ಭಾಗದಲ್ಲಿ , ಪ್ರಕೃತಿಯೇ ಭಾರತದ ಅಭಿವೃದ್ಧಿ ಗೆ ಕೈ ಜೋಡಿಸಿರುವಾಗ ಭಾರತದ ಪ್ರಜೆಗಳಾಗಿ ನಾವು ಮಾಡುವುದೇನು?

ಭಾರತೀಯರ ಏಕತೆಯನ್ನು ಯಾರಿಂದಲೂ ಮುರಿಯಲು ಸಾಧ್ಯವಿಲ್ಲ.ಅಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾರತದ ಪ್ರಜೆಗಳ ಒಗ್ಗಟ್ಟಿನಿಂದಲೇ ಬ್ರಿಟೀಷರು ದೇಶವನ್ನು ಬಿಟ್ಟು ತೊಳಗಿದರು. ಭಾರತದ ಯಾವುದೇ ರಾಜ್ಯದಲ್ಲಿಯೂ ಹಾನಿಯುಂಟಾದರೆ ಈ ದೇಶದವರು ಅದು ನಮ್ಮ ರಾಜ್ಯವಿದ್ದಂತೆ ಭಾವಿಸಿ ನವರಾಜ್ಯದ ನಿರ್ಮಾಣಕ್ಕೆ ಕೈ ಜೋಡಿಸಲೇ ಬೇಕು.ಒಬ್ಬರಿಂದಲೂ ಏನನ್ನು ಮಾಡಲು ಸಾಧ್ಯವಿಲ್ಲ ಎಂದು ಅರಿತ ಭಾರತೀಯರು'ಏಕತೆಯ ನಮ್ಮ ಮಂತ್ರ'ಎಂಬುವುದರೊಂದಿಗೆ ಮುಂದುವರಿಯುತ್ತಿದ್ದಾರೆ.

ಯಾವುದರಲ್ಲಿ ಭಾರತ ಹೊಂದಿದೆ ಯಾವುದರಲ್ಲಿ ಅಭಿವೃದ್ಧಿ ಹೊಂದಿಲ್ಲ ಎಂಬುದನ್ನು ತಿಳಿದುಕೊಂಡುಯಾವೆಲ್ಲಾ ರೀತಿಯಲ್ಲಿ ಅಭಿವೃದ್ಧಿಯುಂಟುಮಾಡಲು ಸಾಧ್ಯ ಎಂಬುದನ್ನು ತಿಳಿದುಕೊಳ್ಳಬೇಕು.ಭಾರತ ದೇಶವನ್ನು ಕಂಡು ಅದರಿಂದ ಬೇರೆದೇಶಗಳಿಗೆ ಅಸಹ್ಯವಾಗುವುದುಂಟು. ಇಂತಹ ಸಂದರ್ಭಗಳಲ್ಲಿ ಭಾರತದ ಪ್ರಜೆಗಳೇ ಭಾರತದ ನಾಶವನ್ನು ಬಯಸಿದರೆ ದೇಶದ ಅಭಿವೃದ್ಧಿಯಾಗಲು ಎಂದೆಂದಿಗೂ ಸಾಧ್ಯವಿಲ್ಲ.ಪ್ರಕೃತಿಯ ನಾಶ,ಕಟ್ಟಡಗಳ ನಿರ್ಮಾಣವು ಅತಿವೃಷ್ಟಿ,ಅನಾವೃಷ್ಟಿಗೆ ಕಾರನವಾಗುತ್ತದೆ. ಹೀಗೆಯೆ ನಡೆಯುತ್ತಿದ್ದರೆ ಭಾರತ ಅಭಿವೃದ್ಧಿ ಹೊಂದಲು ಎಂದಿಗೂ ಸಾಧ್ಯವಿಲ್ಲ.ಮಾನವನಡೆಸುವಂತಹ ಕೆಲವು ಹಸ್ತಕ್ಷೇಪಗಳೆ ಭಾರತವನ್ನು ಸಂದಿಗ್ಧ ಪರಿಸ್ಥಿತಿಗೆ

ಕೊಂಡೊಯ್ಯುತ್ತದೆ.ದೇಶದ ಅಭಿವೃದ್ಧಿಗೆ ಕಟ್ಟಡಗಳ ನಿರ್ಮಾಣ,ಮನೆಗಳ ನಿರ್ಮಾಣ,ಅತಿ ಹೆಚ್ಚು ವಾಹನಗಳ ಸಂಖ್ಯೆಯಿಂದ ಸಾಧ್ಯವಿಲ್ಲ.ಹೀಗೆ ಅಭಿವೃದ್ಧಿ ಮಾಡಲು ಬಯಸಿದರೆ ನಮ್ಮ ನಾಶವಂತು ಖಂಡಿತ.ಯಾವುದೆ ರೀತಿಯಲ್ಲಿ ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬೇಕಾದರೆ ಪ್ರಕೃತಿಯ ಬಗ್ಗೆ ಕೂಡ ಯೋಚಿಸುವುದು ಅತಿ ಅಗತ್ಯವಾಗಿದೆ

ಮಾನವರ ಕಷ್ಟಕರ ಕೆಲಸವನ್ನು ಸರಳಗೊಳಿಸುವುದೆ ಅಭಿವೃದ್ಧಿಯ ಮುಖ್ಯ ಉದ್ದೇಶವಾಗಿದೆ.ಹಿಂದಿದ್ದಂತಹ ಅರೆಯುವಕಲ್ಲು ಬದಲಾಗಿ ಗ್ರೈಂಡರ್,ಒಲೆಯು ಗ್ಯಾಸ್ ಸ್ಟವ್ಗಳಾಗಿ,ಎತ್ತಿನಗಾಡಿಯೂ ಪೆಟ್ರೋಲ್ ವಾಹನಗಳ ತನಕ ಬದಲಾವಣೆಯಾಗಿದೆ.ಈಗ ಇವುಗಳನ್ನೆಲ್ಲಾ ವಸ್ತು ಸಂಗ್ರಹಾಲಯಗಳಲ್ಲಿಯೋ ಅಥವ ಸ್ಟೋರ್ ರೂಮಿನಲ್ಲಿಯೋ ಕಾಣಬಹುದಷ್ಟೆ.ಇದೆಲ್ಲವೂ ಅಭಿವೃದ್ದಿಗೆ ಕೆಲವು ಉದಾಹರಣೆಯಾಗಿದೆ.ಹೇಗಿದ್ದ ಭಾರತ ಹೇಗಾಯಿತು ಎಂಬುದೆ ಆಶ್ಚರ್ಯಕರವಿಷಯ.ಭಾರತವಲ್ಲು ಆಧುನಿಕ ತಂತ್ರಜ್ಞಾನಗಳ ಹೊರತಾಗಿ ಅಭಿವೃದ್ಧಿ ಮಾಡಿದರೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ.

ಯಾವ ರೀತಿಯಲ್ಲಾದರೂ ಭಾರತದ ಅಭಿವೃದ್ದಿಯನ್ನೇ ಬಯಸುವ ಏಕತೆ ಯಿಂದ ಭಾರತವನ್ನು ಅಭಿವೃದ್ಧಿ ಮಾಡುವ.

"ಭಾರತವನ್ನು ಅಭಿವೃದ್ದಿಯತ್ತ ಸಾಗಿಸೋಣ"